quickmarketreports.com Date : 26-08-2016

# ಗೇರು, ಅಡಕೆ ಬೆಳೆಗಾರರ ಸಮಸ್ಯೆ : ಕೇಂದ್ರದ ಗಮನ ಸೆಳೆದ ದೇಶಪಾಂಡೆ

ರಾಜ್ಯದಲ್ಲಿ ಗೇರು ಬೀಜ ಉದ್ಯಮ ಹಾಗೂ ಅಡಕೆ ಬೆಳೆಗಾರರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಆರ್ ವಿ ದೇಶಪಾಂಡೆ ಕೇಂದ್ರ ಸರಕಾರದ ಗಮನ ಸೆಳೆದಿದ್ದಾರೆ.

ಹೊಸ ದಿಲ್ಲಿಯಲ್ಲಿ ಗುರುವಾರ ಕೇಂದ್ರ ವಾಣಿಜ್ಯ ಖಾತೆ ಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ಭೇಟಿಯಾಗಿ ಗೇರು, ಅಡಕೆ ಬೆಳೆಗಾರರ ಸಮಸ್ಯೆಗಳ ಜತೆಗೆ ಕರ್ನಾಟಕದ ನಾನಾ ಯೋಜನೆಗಳ ಬಗ್ಗೆ ಚರ್ಚಿಸಿದರು.

ಮಂಗಳೂರು ಮತ್ತು ಕುಮಟಾ ನಡುವಿನ ಕರಾವಳಿ ಪ್ರದೇಶದಲ್ಲಿ 300 ಕ್ಕೂ ಹೆಚ್ಚು ಗೇರು ಸಂಸ್ಕರಣಾ ಘಟಕಗಳಿದ್ದು ವಾರ್ಷಿಕ 900 ಕೋಟಿ ರೂ. ವೌಲ್ಯದ ಗೇರು ಉತ್ಪನ್ನಗಳ ರಫ್ತು ವಹಿವಾಟು ಆಗುತ್ತಿದೆ. 1.50 ಲಕ್ಷಮಂದಿ ಈ ಉದ್ಯಮದಲ್ಲಿ ತೊಡಗಿದ್ದಾರೆ. ಕುಮಟಾದಲ್ಲಿ ಗೇರು ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಸ್ಥಾಪಿಸಲು ಕೇಂದ್ರಕ್ಕೆಕಳುಹಿಸಿರುವ ಪ್ರಸ್ತಾವನೆಗೆ ತಕ್ಷಣವೇ ಮಂಜೂರು ನೀಡಬೇಕು ಎಂದು ದೇಶಪಾಂಡೆ ಮನವಿ ಮಾಡಿದ್ದಾರೆ.

ಅಡಕೆ ಬೆಳೆಗಾರರು ಬೆಲೆ ಕುಸಿತ ಹಾಗೂ ಬೆಳೆಗೆ ತಗುಲಿರುವ ರೋಗದಿಂದ ಆಹಾರ ಪ್ರಮಾಣದ ನಷ್ಟ ಅನುಭವಿಸಿದ್ದಾರೆ. ಮಲೆನಾಡು ಹಾಗೂ ಕರಾವಳಿ ಭಾಗದ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ತಕ್ಷಣವೇ ಕೇಂದ್ರ ಸರಕಾರ ಸಮಸ್ಯೆ ಬಗೆಹರಿಸಬೇಕೆಂದು ಮನವರಿಕೆ ಮಾಡಿಕೊಟ್ಟಾಗ ಈ ಬಗ್ಗೆ ಕೃಷಿ ಇಲಾಖೆಯ ನೆರವು ಪಡೆದು ಕ್ರಮಕೈಗೊಳ್ಳುವುದಾಗಿ ಸಚಿವ ನಿರ್ಮಲಾ ಸೀತಾರಾಮನ್ ಭರವಸೆ ನೀಡಿದ್ದಾರೆ.